ಲಾಠಿಯ ರುಚಿ ನೋಡಬೇಕಾಗುತ್ತದೆ ಎಂದು ಸಿಕ್ಕಸಿಕ್ಕವರು ಸಿಕ್ಕ ಸಿಕ್ಕಷ್ಟು ಬಾಚಿಕೊಂಡು ಎದ್ದು ಬಿದ್ದು ಮನೆ ಕಡೆ ಓಡತೊಡಗಿದರು. ಜನ ನಿಧಾನವಾಗಿ ಕರಗತೊಡಗಿದರು. ಪೂರ್ತಿ ಕತ್ತಲಾಗುವ ಹೊತ್ತಿಗೆ, ಪೊಲೀಸ್ ಜೀಪು ಬಂದು ಮೈದಾನದಲ್ಲಿ ನಿಂತಿತು. ಅಲ್ಲಿ ಹಾಟ್‌ಮಿಟ್ಲೆ ಮಾತ್ರ ಉಳಿದಿದ್ದ. ಅಲ್ಲೇನೋ ನಡೆದಿತ್ತು ಎಂಬುದಕ್ಕೆ ಸಾಕ್ಷಿಯಾಗಿ ನೋಟುಗಳ ತುಂಡು, ಮಣ್ಣಲ್ಲಿ ಮುಳುಗಿ ಹೋಗಿರುವ ಆಗಷ್ಟೆ ಚಿಂದಿಯಾದಂತಿರುವ ಬಟ್ಟೆ ತುಂಡುಗಳು, ಸಣ್ಣಪುಟ್ಟ ರಕ್ತದ ಕಲೆಗಳು ಕಾಣಿಸುತ್ತಿದ್ದವು.

ಪೊಲೀಸರು ಹಾಟ್‌ಮಿಟ್ಲೆ ಜತೆ ಮಾತನಾಡಿದರು. ಪೊಲೀಸರ ಪ್ರಶ್ನೆಗೂ ತನಗೂ ಯಾವುದೇ ಸಂಬಂಧ ಇಲ್ಲದಂತೆ 'ಹಾಟ್‌ಮಿಟ್ಲೆ ಟೂ ಮಿಟ್ಲೆ ಹಾಟ್ ಹಾಟ್ ಹಾಟ್' ಮತ್ತು 'ಕಾಸ್ಟ್‌ಮಿಟ್ಲೆ ವೈಟ್ ಮಿಟ್ಲೆ ಕಾಸ್ಟ್ ಕಾಸ್ಟ್ ಕಾಸ್ಟ್' ಎಂದು ಒಮ್ಮೆ ಮೆಲ್ಲಗೆ, ಇನ್ನೊಮ್ಮೆ ಜೋರಾಗಿ ಹೇಳುತ್ತಲೇ ಇದ್ದ. ಈತನನ್ನು ನಾಳೆ ವಿಚಾರಣೆ ಮಾಡುವ ಎಂದು ನಿರ್ಧರಿಸಿದ ಪೊಲೀಸರು ಆತನನ್ನು ಬಿಟ್ಟು ಹೊರಟು ಹೋದರು.

ಹಾಟ್‌ಮಿಟ್ಲೆ ಬೊಬ್ಬೆ ಹೊಡೆಯುತ್ತಲೇ ಇದ್ದ. ಸುತ್ತಮುತ್ತಲಿನ ಮನೆಯವರು ನಿದ್ದೆ ಹೋಗುವವರೆಗೂ ಬೊಬ್ಬೆ ಕೇಳುತ್ತಲೇ ಇತ್ತು. ರಾತ್ರಿ ಎಷ್ಟೊತ್ತಿಗೆ ಈತನ ಬೊಬ್ಬೆ ನಿಂತಿತು ಎಂಬುದು ಯಾರಿಗೂ ಗೊತ್ತಾಗಲಿಲ್ಲ.

ಮರುದಿನ ಬೆಳಗ್ಗೆ ಹಾಟ್‌ಮಿಟ್ಲೆಯ ಸುದ್ದಿ ಇಲ್ಲ. ಹಿಂದಿನ ದಿನ ಕುಳಿತಿದ್ದ ಧ್ವಜಸ್ತಂಭದ ಕಟ್ಟೆಗೆ ಬಂದು ಜನ ನೋಡಿದರು. ಇಲ್ಲ. ಆತ ಯಾವಾಗಲೂ ಮಲಗುವ ಶಾಲಾ ಜಗಲಿ ಮತ್ತು ಬಸ್ ನಿಲ್ದಾಣ ನೋಡಿದರು. ಅಲ್ಲೂ ಇಲ್ಲ. ಧ್ವಜಸ್ತಂಭದ ಹಿಂದೆ ಆತನ ಕೈಯಿಂದ ಎಂದೂ ತಪ್ಪದ ಕೋಲು ಅನಾಥವಾಗಿ ಬಿದ್ದಿತ್ತು. ಜೋಳಿಗೆಯೂ ಎಲ್ಲೂ ಕಾಣಿಸಲಿಲ್ಲ.

ಸಿಐಡಿಯಾಗಿ ತನ್ನ ಕೆಲಸ ಮುಗಿಯಿತೆಂದು ಬೇರೆ ಕಡೆ ಹೋದನೇ? ಹುಚ್ಚನೇ? ಭಿಕ್ಷುಕನೇ?

ಈ ಉತ್ತರ ಇಲ್ಲದ ಪ್ರಶ್ನೆಗಳು ಕೆಲವು ದಿನವಷ್ಟೆ ಜನರ ನಡುವೆ ಓಡಾಡಿಕೊಂಡಿದ್ದವು. 'ಹಾಟ್‌ಮಿಟ್ಲೆ ಮಾಯವಾಗಿದ್ದಾನೆ' ಎಂಬ ಸುದ್ದಿ ಎಲ್ಲಿ ಹುಟ್ಟಿತು ಗೊತ್ತಿಲ್ಲ. ಮಿಂಚಿನಂತೆ ಹರಡಿತು. ಇದರ ವೇಗಕ್ಕೆ ಮೊದಲು ಹುಟ್ಟಿದ್ದ ಪ್ರಶ್ನೆಗಳೂ ಮಾಯವಾದವು. ಬಳಿಕ ಈ 'ಮಾಯ್ಕಾರ'ನಿಗೆ ಅನುಯಾಯಿಗಳ ಸಂಘ ಹುಟ್ಟಿಕೊಂಡಿತು. ಅದರ ಸಭೆಗಳು ನಡೆದವು.

'ಸಂಘ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ಅವರು ಬಿಟ್ಟು ಹೋದ ಕೋಲಿಗೆ ಬೆಳ್ಳಿಯ ಕಟ್ಟು ಹಾಕಿಡಲಾಗಿದೆ. 'ಹಾಟ್‌ಮಿಟ್ಲೆ ಸ್ವಾಮಿ'ಯ ಮಹಿಮೆಯನ್ನು ಸಾರುವ, ದಂತಕತೆಯಾದ ಪರಿಯನ್ನು ವಿವರಿಸುವ ಹೊತ್ತಗೆಯನ್ನು ಮುಂದಿನ ವರ್ಷ ಸಂಪೂರ್ಣ ಮಾಹಿತಿಯೊಂದಿಗೆ ಹೊರತರಲು ನಿರ್ಧರಿಸಲಾಗಿದೆ. ಎಲ್ಲರೂ ತಮ್ಮ ಕೈಲಾದಷ್ಟು ಸಹಾಯ ಮಾಡಿ ಮಹಾತ್ಮರ ಪ್ರೀತಿ, ಆಶೀರ್ವಾದಕ್ಕೆ ಪಾತ್ರರಾಗಬೇಕು' ಎಂದು ಅದರ ಮುಂದಾಳತ್ವ ವಹಿಸಿದ್ದ ಗ್ರಾಮದ ಪುಢಾರಿ ಘೋಷಿಸಿದ್ದಾನೆ.

## ಬಾಲಕೃಷ್ಣ ಶಿಬಾರ್ಲ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಶಿಬಾರ್ಲ ಎಂಬ ಪುಟ್ಟ ಹಳ್ಳಿಯವರು. ಪತ್ರಕರ್ತರಾಗಿರುವ ಬಾಲಕೃಷ್ಣ 'ಚಾಕ್ಯಬಾಬಾ' ಎಂಬ ಮಕ್ಕಳ ಕತೆಗಳ ಪುಸ್ತಕವನ್ನು ಪ್ರಕಟಿಸಿದ್ದಾರೆ.